ಪೂಜೆಮಂಗಳಾರತಿಗಂಟೆ ಶಬ್ದ ಎಲ್ಲಾ ಶುರು ಮಾಡ್ಬಿಟ್ರು! ನನಗೆ ಆಗತಾನೆ ಸ್ವಲ್ಪ ನಿದ್ರೆ ಹತ್ತಿದ್ದು ಎಚ್ಚರವಾಗೋಯ್ತು. ಸಾಲದ್ದಕ್ಕೆ ಬ್ರಹ್ಮ ಮುಹೂರ್ತದಲ್ಲಿ ಎದ್ದು ಓದಬೇಕಂತೆ; ಸ್ನಾನ ಮಾಡಿ, ಯೋಗ ಮಾಡಬೇಕಂತೆ, ದೇವರ ಪೂಜೆ ಮಾಡಬೇಕಂತೆ, ಇನ್ನೂ ಏನೇನೋ ಹೇಳುತ್ತಲೇ ಇದ್ದರು... ನಾನು ಮುಸುಕೆಳೆದು ಮಲಗಿಬಿಟ್ಟೆ. ದಿನಾ ಹೀಗೇ ಆದರೆ ಹೇಗೆ ಅಮ್ಮಾ? ಮೆಲುದನಿಯಲ್ಲಿ ಗೊಣಗಿದಳು ಸ್ವಾತಿ.

'ಸ್ವಲ್ಪ ಸಾವರಿಸಿಕೋ ಸ್ವಾತಿ. ಅಜ್ಜಿಗೆ ಬೇಸರ ತರಿಸಬೇಡ. ಅವರಿರುವಷ್ಟು ದಿನ ಅವರು ಹೇಳಿದಂತೆ ಕೇಳು' ವಿಭಾ ಸಮಾಧಾನಿಸಲು ಯತ್ನಿಸಿದಳು.

'ಅಷ್ಟೇ ಅಲ್ಲ ಅಮ್ಮ, ನಾನು ಸ್ನಾನಕ್ಕೆ ಹೋಗಿದ್ದಾಗ ನನ್ನ ದಿನಚರಿ ಪುಸ್ತಕ ತೆಗೆದು ಕಾದಂಬರಿ ಓದೋ ತರಹ ಓದ್ತಾ ಕೂತಿದ್ರು. ನಾನು ಕೈಯಿಂದ ಕಿತ್ತುಕೊಂಡು 'ಹಾಗೆಲ್ಲಾ ಓದ ಬೇಡ ಅಜ್ಜಿ, ಅದು ನನ್ನ ಪರ್ಸನಲ್ ಡೈರಿ ಅಂದೆ. 'ನಿನ್ನ ಬರೆಯುವ ಶೈಲಿ ಹೇಗಿದೇಂತ ನೋಡ್ತಿದ್ದೆ ಕಂದಾ' ಅಂತಾರಮ್ಮ. ನನಗಂತೂ ತುಂಬಾ ಸಿಟ್ಟು ಬಂತು.

'ಅಜ್ಜಿ ಈ ಕಡೇನೇ ಬರ್ತಿದ್ದಾರೆ. ಸುಮ್ಮನಿರು'.

'ಇಲ್ಲಮ್ಮಾ, ಇವತ್ತು ಪಪ್ಪನಿಗೆ ಹೇಳಿ ಸ್ಟೋರ್ ರೂಂ ಖಾಲಿ ಮಾಡಿಸು. ನಾನು ಅಲ್ಲಿಗೆ ಶಿಫ್ಟ್ ಆಗ್ತೀನಿ'.

'ಯಾರು ಎಲ್ಲಿಗೆ ಶಿಫ್ಟ್ ಆಗೋದು? ನಾನು ಊರಿಂದ ಬಂದಿರೋದು ಮಕ್ಕಳ ಜೊತೆ ಕಾಲ ಕಳೆಯೋಕ್ಕೆಒಬ್ಬೊಬ್ಬರು ಒಂದೊಂದು ಕಡೆ ಇದ್ರೆ ಏನು ಚಂದ? ವಿಭಾ ನೀನು ಯಾವ ಸ್ಟೋರ್ ರೂಂ ಖಾಲಿ ಮಾಡಿಸಬೇಡ. ಮಕ್ಕಳಿಬ್ಬರೂ ನನ್ನ ಜೊತೆಗೇ ಇರ್ತಾರೆ, ನಾನಿಲ್ಲಿ ಇರೋವರ್ಗೂ' ತೀರ್ಮಾನವಾಗಿ ಹೇಳಿದರು ಕಮಲಮ್ಮ.

***

'ನಿಮ್ಮ ಅಪ್ಪ ಅಮ್ಮ ಒಟ್ಟಿಗೆ ಹೊರಗೆ ಹೋಗಿದ್ದಾರೆ. ಅವರು ಬರೋ ಹೊತ್ಗೆ ಏನಾದ್ರೂ ರುಚಿಯಾಗಿ ಅಡುಗೆ ಮಾಡ್ತೀನಿ. ಹೋಗಿ ತರಕಾರಿ, ಹಣ್ಣು ತೆಗೆದುಕೊಂಡು ಬಾರೇ ಸ್ವಾತಿ' ಕಮಲಮ್ಮ ಹೇಳಿದರು.


'ಅಪ್ಪ ಅಮ್ಮ ಕಾರು ತೆಗೆದುಕೊಂಡು ಹೋಗಿದ್ದಾರೆ. ನಾನು ಅಮ್ಮನ ಸ್ಕೂಟಿನಲ್ಲಿ ಹೋಗಿ ತರ್ತೀನೆ ಅಜ್ಜಿ! ಸೈಕಲ್‌ನಲ್ಲಿ ಹೋದರೆ ಲೇಟಾಗುತ್ತೆ. ನನಗೆ ತುಂಬಾ ಹೋಂವರ್ಕ್ ಮಾಡೋದಿದೆ'.

'ನಿನ್ನಮ್ಮ ಸ್ಕೂಟರ್ ಮುಟ್ಟಬೇಡ ಅಂತಾರಲ್ಲೇ!'

'ಅದೆಲ್ಲಾ ಆಗ ಅಜ್ಜಿ! ಈಗ, ನನಗೆ ತೊಗೋಳೊಕ್ಕೆ ಅಮ್ಮನೇ ಪರ್ಮಿಷನ್ ಕೊಟ್ಟಿದ್ದಾರೆ' ಎನ್ನುತ್ತಾ ಉತ್ತರಕ್ಕೆ ಕಾಯದೆ ಕೀಲಿಕೈ ತಿರುಗಿಸುತ್ತಾ ಹೆಲ್ಮೆಟ್ ಹಿಡಿದು ನಡೆದಳು ಸ್ವಾತಿ.

ಕೆಳಗೆ ಕ್ರಿಕೆಟ್ ಬ್ಯಾಟ್ ಹಿಡಿದಿದ್ದ ಸಂಜಯ್ ಅಕ್ಕಾ ಸ್ಕೂಟಿ ತೆಗೆಯುವುದು ನೋಡಿ 'ಏನೇ ಅಕ್ಕಾ! ಅಮ್ಮಾ ಇಲ್ಲದೇ ಇರುವಾಗ ಅವರ ಸ್ಕೂಟಿ ತಗೊಳ್ತಾ ಇದ್ದೀಯಾ?' ಎಂದ.

'ಆಗಾಗ ಅಭ್ಯಾಸ ಮಾಡಿಕೋ ಅಂತ ಅಮ್ಮನೇ ಹೇಳಿದ್ದಾರೆ' ಸುಳ್ಳಾಡಿದಳು ಸ್ವಾತಿ. ಗಾಡಿ ಚಲಿಸಿಯೇ ಬಿಟ್ಟಿತು!




"ಪಕ್ಷ ಒಡೆಯುವ ರಾಜಕಾರಣಿಗಳಿಗೂ "ಬ್ರೇಕರ್" ಪ್ರಶಸ್ತಿ ಇರಬೇಕಿತ್ತೀ..!!?"

***

'ಮನೆಯೆಲ್ಲಾ ಹುಡುಕಿದರೂ ಸಂಜಯ್ ಕಾಣ್ತಿಲ್ವಲ್ಲಾ... ಎಲ್ಲಿ ಹೋದ? ಅಮ್ಮಾ, ನಿನಗೇನಾದರೂ ಹೇಳಿ ಹೋದನಾ?' ವಿಜಯ್ ಗಾಬರಿಯಿಂದ ಕೇಳಿದರು.

'ಕೆಳಗೆ ಕ್ರಿಕೆಟ್ ಆಡ್ತಿರ್ತೀನಿ ಅಂದ್ನಲ್ಲಾ' ಕಮಲಮ್ಮನಿಗೂ ದಿಗಿಲಾಯಿತು.

'ನಾನು ತರಕಾರಿ ತರಲು ಹೋದಾಗ ಕೆಳಗೇ ಇದ್ದ' ಎಂದಳು ಸ್ವಾತಿ.

ಸ್ವಲ್ಪ ಹೊತ್ತಿನಲ್ಲೇ ಹುಡುಕಲು ಹೋದ ವಿಜಯ್‌ವಿಭಾ ಇಬ್ಬರೂ ಹಿಂತಿರುಗಿದರು. ಜೊತೆಗೆ ಕೆಳಗೆ ಬಿದ್ದು ಮೈ ಕೈಯೆಲ್ಲಾ ಗಾಯ ಮಾಡಿಕೊಂಡ ಸಂಜಯ್‌ನನ್ನು ಕರೆತಂದಿದ್ದರು.

'ಏನಾಯ್ತು ಕಂದಾ? ಎಲ್ಲಿ ಹೋಗಿ ಬಿದ್ದೆ?' ಓಡಿಬಂದರು ಕಮಲಮ್ಮ.

'ಅಕ್ಕ ಸ್ಕೂಟಿ ತೊಗೊಂಡು ಹೋಗುವಾಗ ಹೇಳಿದಳು ಆಗಾಗ ಓಡಿಸೋದು ಅಭ್ಯಾಸ ಮಾಡ್ಕೋಬೇಕು' ಅಂತ. ಅದಕ್ಕೆ ಅಕ್ಕನ ಸೈಕಲ್ ಓಡಿಸಲು ನಾನು ಅಭ್ಯಾಸ ಮಾಡ್ತಿದ್ದೆ. ಹಳ್ಳಕ್ಕೆ ಬಿದ್ದೆ'



ಅಳುತ್ತಾ ಹೇಳಿದ ಸಂಜಯ್.

'ಏನು, ನನ್ನ ಸ್ಕೂಟಿ ತೆಗೆದುಕೊಂಡು ಹೋಗಿದ್ಯಾ ಸ್ವಾತಿ? ಮುಟ್ಟಬೇಡ ಎಂದಿರಲಿಲ್ವಾ ನಿನಗೆ? ನೋಡು ಈಗ ನಿನ್ನ ಮೇಲ್ಪಂಕ್ತಿ; ಇವನೂ ಬಿದ್ದ. ಹಾಗೇ ನಿನಗೂ ಏನಾದರೂ ಆಗಿದ್ದರೆ?' ವಿಭಾ ಧ್ವನಿಯೇರಿಸಿ ಕೂಗಿದಳು. ವಿಜಯ್ ದೊಡ್ಡದಾಗಿ ಕಣ್ಣುಬಿಟ್ಟು ಮಗಳತ್ತ ನೋಡಿದರು.

ಕಮಲಮ್ಮ ನಡುವೆ ಬಾಯಿ ಹಾಕಿ 'ಅವಳು ಸೈಕಲ್‌ನಲ್ಲೇ ಹೊರಟಿದ್ದಳು. ಐಸ್‌ಕ್ರೀಂ ತರೋ ಅಷ್ಟರಲ್ಲಿ ಕರಗಿ ಹೋಗುತ್ತೇಂತ ನಾನೇ ಸ್ಕೂಟಿಯಲ್ಲಿ ಕಳುಹಿಸಿದೆ. ತಪ್ಪು ನನ್ನದೇ'.

'ಅಮ್ಮಾ! ನಿಮಗಷ್ಟು ಶುಗರ್ ಇದೆ! ಐಸ್‌ಕ್ರೀಂ ತಿನ್ನುವ ಚಪಲವೇ?' ಸೊಸೆ ಖಂಡಿಸಿದಳು.

'ನೀನೂ ಯಾರ್ಕೋ ಮಕ್ಕಳ ತರಹ ಆಗ್ಬಿಟ್ಟಿದ್ದೀಯಾ ಅಮ್ಮಾ' ಮಗ ಗದರಿದ.

'ಅಯ್ಯೋ ಬರೀ ನನಗಲ್ಲವೋ! ನಿಮಗೆಲ್ಲಾ ಖುಷಿಯಾಗಲಿ ಅಂತ ನಾನೇ ತರಿಸಿದೆ. ಜೊತೆಗೆ ಕ್ಯಾರೆಟ್ ಹಲ್ವ ಮಾಡಿದ್ದೀನಿ. ಪಲಾವ್, ಪಚ್ಚಡಿ ಎಲ್ಲಾ ರೆಡಿಯಿದೆ. ಮಗೂಗೆ ಗಾಯಕ್ಕೆ ಏನಾದ್ರೂ ಮುಲಾಮು ಹಚ್ಚಿ ಬನ್ನಿ, ಎಲ್ಲಾ ಊಟಕ್ಕೆ ಹೊತ್ತಾಗಿದೆ' ಎಂದರು ಕಮಲಮ್ಮ ಮಾತು ಮುಗಿಸಲು. ಅಜ್ಜಿ ತನಗಾಗಿ ಅನೃತವಾಡಿದ್ದಕ್ಕೆ, ತಪ್ಪನ್ನು ತಮ್ಮ ಮೇಲೆಳೆದುಕೊಂಡು ತನ್ನನ್ನು ಬಚಾವ್ ಮಾಡಿದ್ದಕ್ಕೆ ಸ್ವಾತಿ ಅವರ ಕಡೆ ಕೃತಜ್ಞತೆಯಿಂದ ನೋಡಿದಳು. ಕಣ್ಣು ಮಿಟುಕಿಸಿದರು ಕಮಲಮ್ಮ.

***

ಮರುದಿನ ಸ್ವಾತಿ ದಿನಚರಿ ಪುಸ್ತಕ ತೆರೆದು ಬರೆದಳು.

'ಜೀವನದಲ್ಲಿ ಮೊದಲ ಬಾರಿಗೆ ಅಜ್ಜಿಯ ಗೊರಕೆ, ದೇವರ ಪೂಜೆ, ಗಂಟೆ, ಮಂಗಳಾರತಿ ಯಾವ ಶಬ್ದವೂ ನನ್ನ ನಿದ್ರೆ ಕೆಡಿಸಲಿಲ್ಲ! ಸಂಜೂ ನನ್ನ ಮೇಲೆ ಕಾಲು ಹಾಕಿ, ಒದ್ದರೂ, ನಾನು ಮಿಸುಕಾಡದೆ ಮಲಗಿದ್ದೆ... ನಾನು ಅಜ್ಜಿಸಂಜಯ್‌ನ ನಡುವೆ 'ಸ್ಯಾಂಡ್‌ವಿಚ್' ಆದರೂ ಕಷ್ಟವೆನಿಸಲಿಲ್ಲ. ಪ್ರಾಯಶಃ ಅಜ್ಜಿ ನನ್ನ ಪರ ವಹಿಸಿ ನನ್ನನ್ನು ಬಚಾವ್ ಮಾಡಿದರೆಂದು ನನಗವರು ಪ್ರಿಯರಾದರೇ? ನನ್ನ ಸುಳ್ಳು, ಮಾರ್ಗದರ್ಶನದಿಂದ, ನನ್ನ ಪ್ರೀತಿಯ ಸಂಜಯ್ ಬಿದ್ದು ಪೆಟ್ಟು ಮಾಡಿಕೊಂಡನೆಂದು ನನಗೆ ಅವನ ಮೇಲೆ ಅನುತಾಪವಾಯ್ತೇ?

ಕುಟುಂಬದವರೆಲ್ಲಾ ಒಟ್ಟಿಗೆ ಒಗ್ಗಟ್ಟಾಗಿ ಇರಬೇಕೆಂದು ಅಜ್ಜಿ ನಿನ್ನೆ ರಾತ್ರಿ ಹೇಳಿದ ಪಂಚತಂತ್ರದ ಕಥೆ ನನ್ನ ಹಾಗೂ ಸಂಜಯ್‌ನ ಮೇಲೆ ಪರಿಣಾಮ ಬೀರಿರಬಹುದೇ? ಅದೇಕೋ ನನ್ನ ವಸ್ತುಗಳೊಂದಿಗೆ ಸ್ಟೋರ್ ರೂಂಗೆ ಹೋಗುವ ನನ್ನ ನಿರ್ಧಾರ ಈಗ ಸಡಿಲವಾಗಿತ್ತು. ನನ್ನದೇ ಕೋಣೆ ಬೇಕೆಂಬ ಧಾವಂತ ಇಲ್ಲದಾಗಿತ್ತು. ನನ್ನ ಕೋಣೆ ಚಿಕ್ಕದು ಎಂದು ನನಗೆ ಅನ್ನಿಸಲೇ ಇಲ್ಲ. ನನ್ನ ಹೃದಯ ವಿಶಾಲವಾಗಿದ್ದರಿಂದಲೇ? ಕಮಲಜ್ಜಿಯ ಮೇಲೆ, ಸಂಜಯ್‌ನ ಮೇಲೆ, ಪ್ರೀತಿ ಉಕ್ಕುಕ್ಕಿ ಹರಿಯುತ್ತಿತ್ತು. ಹೀಗೆ ಬರೆದ ಸ್ವಾತಿ ನಸುನಗುತ್ತಾ ತನ್ನ ದಿನಚರಿ ಪುಸ್ತಕ ಮುಚ್ಚಿದಳು.

ಪ್ರತಿಕ್ರಿಯಿಸಿ: feedback@sudha.co.in